ಸನ್ನಡತೆ ಆಧಾರದ ಮೇಲೆ ಖೈದಿಗಳ ಬಿಡುಗಡೆ

1166(2332); ಶ್ರೀ ಭೂಸನೂರ ರಮೇಶ್ ಬಾಳಪ್ಪ (ಸಿಂಧಗಿ)

ಅ) ಈ ಹಿಂದೆ ಯಾವ ವರ್ಷ ಸನ್ನಡತೆ ಆಧಾರದ ಮೇಲೆ ಕೈದಿಗಳನ್ನು ಬಿಡುಗಡೆ ಮಾಡಲಾಗಿದೆ.

ಆ) ಇನ್ನು ಮುಂದೆ ಸನ್ನಡತೆ ಆಧಾರದ ಮೇಲೆ ಕೈದಿಗಳ ಬಿಡುಗಡೆ ಸರ್ಕಾರ ಕ್ರಮ ಕೈಗೊಂಡಿದೆಯೇ, ಹಾಗಿದ್ದಲ್ಲಿ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ.

ಇ) ಹಾಗಿದ್ದಲ್ಲಿ, ಯಾವಾಗ ಸನ್ನಡತೆ ಆಧಾರದ ಮೇಲೆ ಕೈದಿಗಳನ್ನು ಬಿಡುಗಡೆಗೊಳಿಸಲಾಗುವುದು;

ಈ) ಕೈದಿಗಳ ಅಕಾಲಿಕ ಬಿಡುಗಡೆ ಸಂಬಂಧ ಸರ್ಕಾರದಲ್ಲಿ ಬಾಕಿ ಇರುವ ಕಡತಗಳ ಸಂಖ್ಯೆ ಎಷ್ಟು; ಹಾಗೂ ಸದರಿ ಕಡತಗಳ ವಿಲೇವಾರಿ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ;

ಉ) ಕಡತಗಳ ವಿಲೇವಾರಿ ವಿಳಂಬಕ್ಕೆ ಕಾರಣಗಳೇನು; (ವಿವರ ನೀಡುವುದು)

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು)

ಅ) ಸರ್ಕಾರದ ಆದೇಶ ಸಂಖ್ಯೆ:ಹೆಚ್.ಡಿ. 140 ಪಿ.ಆರ್.ಎ. 2006, ಬೆಂಗಳೂರು ದಿನಾಂಕ:14.08.2006ರ ಸರ್ಕಾರದ ಆದೇಶದನ್ವಯ ದಿನಾಂಕ:15.08.2006 ರಂದು 309 ಜನ ಜೀವಾವಧಿ ಶಿಕ್ಷಾ ಬಂದಿಗಳನ್ನು ಸನ್ನಡತೆಯ ಆಧಾರದ ಮೇಲೆ ಅಕಾಲಿಕ ಬಿಡುಗಡೆ ಮಾಡಲಾಗಿದೆ. ತದನಂತರ ಇಲ್ಲಿಯವರೆಗೂ ಯಾವುದೇ ಶಿಕ್ಷಾ ಬಂದಿಗಳನ್ನು ಸನ್ನಡತೆ ಆಧಾರದ ಮೇಲೆ ಅಕಾಲಿಕ ಬಿಡುಗಡೆ ಮಾಡಿರುವುದಿಲ್ಲ.

ಆ) ಹೌದು.

ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ 138 ಪಿಆರ್‌ಎ 2013, ದಿನಾಂಕ:07.01.2014 ರಂದು ಶಿಕ್ಷಾ ಬಂದಿಗಳನ್ನು ಅಕಾಲಿಕ ಬಿಡುಗಡೆ ಮಾಡುವ ಬಗ್ಗೆ ಮಾರ್ಗಸೂಚಿಗಳು ರಚನೆಯಾಗಿದ್ದು, ಸದರಿ ಮಾರ್ಗಸೂಚಿಗಳ ಪ್ರಕಾರ ಮಾಫಿ ಸೇರಿದಂತೆ 14 ವರ್ಷ ಶಿಕ್ಷೆ ಪೂರೈಸಿದ ಅರ್ಹ ಜೀವಾವಧಿ ಶಿಕ್ಷಾ ಬಂದಿಗಳನ್ನು ಸ್ಥಾಯಿ ಸಲಹಾ ಮಂಡಳಿಯ ಮುಂದೆ ಹಾಜರುಪಡಿಸಿ, ಸದರಿ ಸಭೆಯಲ್ಲಿ ಶಿಫಾರಸ್ಸು ಮಾಡಿರುವ ರಾಜ್ಯದ ವಿವಿಧ ಕೇಂದ್ರ ಕಾರಾಗೃಹಗಳ 260 ಜನ ಜೀವಾವಧಿ ಶಿಕ್ಷಾ ಬಂದಿಗಳನ್ನು ಅಕಾಲಿಕ ಬಿಡುಗಡೆ ಮಾಡುವ ಕುರಿತು ದಿನಾಂಕ 06.08.2014 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, (ಸೆರೆಮನೆಗಳು, ಅಪರಾಧಗಳು ಮತ್ತು ಸಹಾಯಕ ಸೇವೆಗಳು) ಒಳಾಡಳಿತ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಶಿಫಾರಸ್ಸು ಮಾಡಲಾಗಿರುತ್ತದೆ.

ಇ) ಈ ಮಧ್ಯೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:48/2014ರಲ್ಲಿ ರಾಜ್ಯ ಸರ್ಕಾರ ವಿರುದ್ಧ ಶ್ರೀ ಹರಿಹರನ್ ಅಲಿಯಾಸ್ ಮುರುಗನ್ ಇವರ ಪ್ರಕರಣದಲ್ಲಿ ದಿನಾಂಕ 09.07.2014 ರಂದು ರಾಜ್ಯ ಸರ್ಕಾರಗಳು ಸಜಾ ಬಂದಿ ಖೈದಿಗಳನ್ನು ಅಕಾಲಿಕ ಬಿಡುಗಡೆ ಮಾಡುವ ಕುರಿತು ಅಧಿಕಾರ ಚಲಾವಣೆಯನ್ನು ಸ್ಥಗಿತಗೊಳಿಸುವಂತೆ ನಿರ್ದೇಶಿಸಿರುವ ಹಿನ್ನಲೆಯಲ್ಲಿ ಸರ್ಕಾರವು ಈ ಹಿಂದೆ ಶಿಫಾರಸ್ಸು ಮಾಡಲು ತೆಗೆದುಕೊಂಡಿರುವ ಕ್ರಮಕ್ಕೆ ತಡೆಯಾಜ್ಞೆಯನ್ನು ನೀಡಲಾಗಿದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಮುಂದೆ ನೀಡುವ ತೀರ್ಪಿನನುಸಾರ ಜೀವಾವಧಿ ಶಿಕ್ಷಾ ಬಂಧಿಗಳನ್ನು ಅಕಾಲಿಕ ಬಿಡುಗಡೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಈ) ಸರ್ಕಾರದಲ್ಲಿ ಒಂದು ಕಡತ ಬಾಕಿ ಇದ್ದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡುವ ಅಂತಿಮ ತೀರ್ಪಿನ ಅನುಸಾರ ವಿಲೇವಾರಿಗೆ ಕ್ರಮ ಕೈಗೊಳ್ಳಲಾಗುವುದು.

ಉ) ಉದ್ಭವಿಸುವುದಿಲ್ಲ.

ಕೈಗಾರಿಕೆ ನಿವೇಶನಗಳು

1167(2333); ಶ್ರೀ ಭೂಸನೂರ ರಮೇಶ್ ಬಾಳಪ್ಪ (ಸಿಂಧಗಿ)

ಅ) ಸಣ್ಣ ಕೈಗಾರಿಕೆ ಇಲಾಖೆಯಡಿ ಕೆ.ಎಸ್.ಎಸ್.ಐ.ಡಿ.ಸಿ ಯಿಂದ ವಿಜಯಪುರ ಜಿಲ್ಲೆಯ ಸಿಂದಗಿಯಲ್ಲಿ ಎಷ್ಟು ಕೈಗಾರಿಕಾ ನಿವೇಶನಗಳನ್ನು ನಿರ್ಮಿಸಲಾಗಿದೆ.

ಆ) ಹಾಗಿದ್ದಲ್ಲಿ ಹೀಗೆ ನಿರ್ಮಿಸಿದ ಕೈಗಾರಿಕೆ ನಿವೇಶನಗಳಲ್ಲಿ ಎಷ್ಟು ನಿವೇಶನಗಳನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ. (ಫಲಾನುಭವಿಗಳ ಹೆಸರು ಮತ್ತು ನಿವೇಶನ ವಿಸ್ತೀರ್ಣ; ಮೊತ್ತದೊಂದಿಗೆ ಮಾಹಿತಿ ಒದಗಿಸುವುದು)

ಇ) ಇನ್ನು ಹಂಚಿಕೆಯಾಗದೇ ಬಾಕಿ ಉಳಿದ ಕೈಗಾರಿಕಾ ನಿವೇಶನಗಳು ಎಷ್ಟು;

ಈ) ಹಾಗಿದ್ದಲ್ಲಿ ಈ ಕೈಗಾರಿಕಾ ನಿವೇಶನಗಳನ್ನು ಯಾವಾಗ ಅರ್ಹರಿಗೆ ಹಂಚಿಕೆ ಮಾಡಲಾಗುವುದು;

ಶ್ರೀ ಸತೀಶ್ ಜಾರಕಿಹೊಳಿ (ಮಾನ್ಯ ಸಣ್ಣ ಕೈಗಾರಿಕೆ ಸಚಿವರು)

ಅ) ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವು ವಿಜಯಪುರ ಜಿಲ್ಲೆಯ ಸಿಂಧಗಿ ಗ್ರಾಮದಲ್ಲಿ ಒಟ್ಟು 28 ಎಕರೆ 36 ಗುಂಟೆ ಜಮೀನನ್ನು ಸರ್ಕಾರದಿಂದ ಭೂಸ್ವಾಧೀನಪಡಿಸಿಕೊಂಡು, ಸದರಿ ಜಮೀನಿನ ಪೈಕಿ ನಿಗಮವು 21 ಎಕರೆ 36 ಗುಂಟೆ ಜಮೀನನ್ನು